<u>ಮಧ್ಯಂತರ ಅರ್ಜಿ ಸಂಖ್ಯೆ **2** ರ ಮೇಲಿನ ಆದೇಶ</u>

ಎದುರುದಾರರ 3 ರ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ: **2** ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10(2)** ಸಹಕಲಂ **151** ರಡಿಯಲ್ಲಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಎದುರದಾರರ **3** ರವರನ್ನು ಈ ಪ್ರಕರಣದಿಂದ ತೆಗೆದು ಹಾಕುವಂತೆ ಕೋರಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು.

VIJAYAKUMAR KANNUR Digitally signed by VIJAYAKUMAR KANNUR Date: 2024.08.07 12:48:03 +0530

**2.** ಸದರಿ ಮಧ್ಯಂತರ ಅರ್ಜಿಗೆ ಎದುರುದಾರ **3** ಪರ ವಕೀಲರು ಮೆಮೋ ಆಫ್ ಪ್ಯಾಕ್ಟನ್ನು ಸಲ್ಲಿಸಿ ಈ ಪ್ರಕರಣಕ್ಕೆ ಎದುರದಾರ **3** ರವರು ಅವಶ್ಯಕ ಪಕ್ಷಗಾರರಾಗಿರುವುದಿಲ್ಲ ಹಾಗೂ ಈ ಅಪಘಾತ ನಡೆದಾಗ ದ್ವಿಚಕ್ರವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರವನ್ನು ಹೊಂದಿರುವುದಿಲ್ಲ ಹಾಗೂ ತಿದ್ದುಪಡಿಯಾದ ಮೋಟಾರು ವಾಹನ ಅಧಿನಿಯಮ ಕಲಂ.**166(3)** ರಡಿಯಲ್ಲಿ ಈ ಅಪಘಾತವಾದ **1** ವರ್ಷ **8** ತಿಂಗಳ ನಂತರ ಈ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಆದ್ದರಿಂದ ಈ ಪರಿಹಾರ ಅರ್ಜಿಯು ಕಾನೂನಿನಡಿಯಲ್ಲಿ ಊರ್ಜಿತವಾಗಿರುವುದಿಲ್ಲ ಹಾಗೂ ಕಾಲಪರಿಮಿತಿ ಅಧಿನಿಯಮದಿಂದ ಪ್ರತಿಶೇಧಿತವಾಗಿರುವುದು. ಆದ್ದರಿಂದ ಈ ಅರ್ಜಿಯಲ್ಲಿನ ಎದುರುದಾರ **3** ರವರನ್ನು ತೆಗೆದು ಹಾಕುವಂತೆ ಕೋರಿ ಈ ಮಧ್ಯಂತರ ಅರ್ಜಿಯಲ್ಲಿ ವಿನಂತಿಸಿಕೊಂಡಿರುವರು.

**3.** ಈ ಮಧ್ಯಂತರ ಅರ್ಜಿಗೆ ಅರ್ಜಿದಾರರ ಪರ ವಕೀಲರಿಗೆ ವಿಸ್ತೃತವಾದ ತಮ್ಮ ತಕರಾರನ್ನು ಸಲ್ಲಿಸಿ ಈ ಮಧ್ಯಂತರ ಅರ್ಜಿಯು ಕಾನೂನಿನಿಂದಾಗಲೀ, ಸಂಗತಿಗಳಿಂದಾಗಲಿ, ಊರ್ಜಿತವಾಗಿರುವುದಿಲ್ಲ. ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಮೆಮೋ ಆಫ್ ಫ್ಯಾಕ್ಟ್ಸ್ ದಲ್ಲಿ ಹೇಳಿರುವ ಸಂಗತಿಗಳು ಸಹ ನಿಜವಿರುವುದಿಲ್ಲ. ಈ ಅಪಘಾತವಾದ ನಂತರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖಾಧಿಕಾರಿ ಪ್ರಕರಣವನ್ನು ತನಿಖೆ ಕೈಗೊಂಡು ದ್ವಿಚಕ್ರವಾಹನ ನೋಂದಾಣಿ ಸಂಖ್ಯೆಃಕೆಎ-**17**/ಹೆಚ್‌ಡಿ-**0990** ಚಾಲಕನ ವಿರುದ್ಧ ಭಾರತೀಯ ದಂಡ ಸಂಹಿತೆ ಕ್ರಮ **279, 337** ಹಾಗೂ **338** ರಲ್ಲಿ ಅಡಿಯಲ್ಲಿ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಆದ್ದರಿಂದ ಈ ಅಪಘಾತವು **1** ನೇ ಎದುರದಾರ ವಾಹನದ ಚಾಲಕನ ನಿರ್ಲಕ್ಷತೆಯಿಂದ ಆಗಿರುವುದು ಆದ್ದರಿಂದ ಈ ಮಧ್ಯಂತರ ಅರ್ಜಿ ಕಾನೂನಿನಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಈ ಅರ್ಜಿಯನ್ನು ವಜಾಗೊಳಿಸುವಂತೆ ವಿನಂತಿಸಿಕೊಂಡಿರುವರು.

**4.** ಉಭಯ ವಕೀಲರ ವಾದವನ್ನು ಆಲಿಸಲಾಯಿತು. ಪ್ರಕರಣದ ಕಡತವನ್ನು ಪರಿಶೀಲಿಸಲಾಯಿತು.

**5.** ಅರ್ಜಿದಾರರು ಅರ್ಜಿಯಲ್ಲಿ ಹೇಳಿರುವಂತೆ ಈ ಅಪಘಾತವು ದಿನಾಂಕ:**25.04.2021** ಸಾಯಂಕಾಲ **3.30** ಗಂಟೆ ಸಮಯದಲ್ಲಿ ದ್ವಿಚಕ್ರ ವಾಹನ ನೋಂದಣಿ ಸಂಖ್ಯೆ:ಕೆಎ**-26/**ಇಬಿ**-6151** ದನ್ನು ಚಲಾಯಿಸಿಕೊಂಡು ಹೋಗುವಾಗ **1** ನೇ ಎದುರದಾರ ಮಾಲೀಕತ್ವದ ವಾಹನ ನೋಂದಣಿ ಸಂಖ್ಯೆ:ಕೆಎ**-17/**ಹೆಚ್‌ಡಿ**-0990** ದ ಸವಾರನು ಈ ಅಪಘಾತ ಪಡಿಸಿದ್ದು, ಆ ಕಾರಣಕ್ಕಾಗಿ ಪರಿಹಾರ ಕೋರಿ ಈ ಅರ್ಜಿಯನ್ನು ಅರ್ಜಿದಾರರ ದಾಖಲು ಮಾಡಿರುವರು. ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತೆ ಈ ಅರ್ಜಿಯು ತಿದ್ದುಪಡಿಯಾದ ಮೋಟಾರು ವಾಹನ ಅಧಿನಿಯಮ **2019** ರ ಪ್ರಕಾರ ಕಾಲಪರಿಮಿತಿ ಅಧಿನಿಯಮದಿಂದ ಪ್ರತಿಶೇಧಿತವಾಗಿರುವುದಾಗಿ ಎಂದು ಹೇಳಿದ್ದು, ಆದರೆ ಈ ತಿದ್ದುಪಡಿಯಾದ ಮೋಟಾರು ವಾಹನ ಅಧಿನಿಯಮ ದಿನಾಂಕ:**01.04.2022** ರಿಂದ ಜಾರಿಗೆ ಬಂದಿರುವುದರಿಂದ ಈ ಅಪಘಾತವು ದಿನಾಂಕ:**25.04.2021** ರಂದು ಆಗಿರುವುದು. ಆದ್ದರಿಂದ ಈ ತಿದ್ದುಪಡಿಯಾದ ಮೋಟಾರು ವಾಹನ ಅಧಿನಿಯಮ ಜಾರಿಗೆ ಬರುವ ಪೂರ್ವದಲ್ಲೇ ಈ ಅಪಘಾತವಾಗಿರುವುದರಿಂದ ಈ ಅರ್ಜಿಯು ಕಾನೂನಿನಡಿಯಲ್ಲಿ ಕಾಲಪರಿಮಿತಿ ವ್ಯಾಪ್ತಿಯಿಂದ ಪ್ರತಿಶೇಧಿತವಾಗಿರುವುದಿಲ್ಲ. ಅದೇರೀತಿಯಾಗಿ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತೆ ಅಪಘಾತವಾದ ಸಮಯದಲ್ಲಿ ಅರ್ಜಿದಾರರು ಪ್ರಯಾಣಿಸುತ್ತಿರುವ ದ್ವಿಚಕ್ರವಾಹನದ ಸವಾರನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪ್ರಮಾಣ ಪತ್ರವನ್ನು ಹೊಂದಿರುವುದಿಲ್ಲ ಎಂದು ಹೇಳಿದ್ದು, ಆದರೆ ಈ ಪ್ರಕರಣದ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುವ ತನಿಖಾಧಿಕಾರಿಯ ಪ್ರಕಾರ ಈ ಅಪಘಾತ ಅರ್ಜಿದಾರನು ಪ್ರಯಾಣಿಸುತ್ತಿರುವ ವಾಹನ ಚಾಲಕನ ನಿರ್ಲಕ್ಷ್ಯತನದಿಂದ ಆಗಿರುವ ಬಗ್ಗೆ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದಿಲ್ಲ. ಆದರೆ **1** ನೇ ಎದುರದಾರ ಮಾಲೀಕತ್ವದ ವಾಹನದ ಸವಾರನ ನಿರ್ಲಕ್ಷ್ಯತನದಿಂದ ಈ ಅಪಘಾತವಾಗಿರುವುದಾಗಿ ಎಂದು ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುವರು. ಆದ್ದರಿಂದ ಈ ಹಂತದಲ್ಲಿ ಯಾರ ತಪ್ಪಿನಿಂದ ನಿರ್ಲಕ್ಷ್ಯತೆಯಾಗಿರುವುದು ಎಂಬುವುದನ್ನು ರುಜುವಾತುಪಡಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಸಂಗತಿಯನ್ನು ರುಜುವಾತುಪಡಿಸಬೇಕಾದರೆ ಉಭಯ ಪಕ್ಷಗಾರರ ಸಾಕ್ಷ್ಯಧಾರಗಳ ಅವಶ್ಯಕತೆ ಇರುವುದು. ಆದ್ದರಿಂದ ಈ ಹಂತದಲ್ಲಿ ಎದುರುದಾರ **3** ರವರು ತೆಗೆದುಕೊಂಡಿರುವ ಪ್ರತಿರಕ್ಷೆ ಕಾನೂನು ಸಮ್ಮತ ವಾಗಿರುವುದಿಲ್ಲ.

ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಮಂಜಸವಾದ ಕಾರಣಗಳು ಇರುವುದಿಲ್ಲ. ಆದ್ದರಿಂದ ಈ ಕೆಳಕಂಡತೆ,

## ಆದೇಶ

ಎದುರುದಾರ **3** ರವರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10(2)** ಸಹಕಲಂ **151** ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಸಂಖ್ಯೆ:**2** ನ್ನು ವಜಾಗೊಳಿಸಲಾಗಿದೆ.

ವಿವಾದಾಂಶಗಳ ರಚನೆಗಾಗಿ ಮುಂದೆ ಕರೆಯುವ ತಾರೀಖು: **13.08.2024**

VIJAYAKUMAR KANNUR
Digitally signed by VIJAYAKUMAR KANNUR
Date: 2024.08.07 12:49:39 +0530

(ವಿಜಯಕುಮಾರ ಎಮ್ ಕನ್ನೂರು)
ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ,
ನ್ಯಾಯಾಧೀಶರು, ಮುಧೋಳ.